# ಈ ಹೊತ್ತಿಗೆ ಇ – ಹೊತ್ತಿಗೆ

ಡಾ.ಪ್ರಕಾಶ್ ಐ.ಎನ್

ಗ್ರಂಥಪಾಲಕರು

ಅಲಯನ್ಸ್ ವಿಶ್ವವಿದ್ಯಾಲಯ

ಆನೇಕಲ್, ಬೆಂಗಳೂರು - ೫೬೨ ೧೦೬

ಹೊತ್ತಿಗೆ(ಪುಸ್ತಕ) ಈಗ ಕೇವಲ ಕಾಗದದ ರೂಪದಲ್ಲಿ ಮಾತ್ರ ಉಳಿದಿಲ್ಲ. ಹೊತ್ತಿಗೆಯ ರೂಪ, ಭಾವವೆಲ್ಲಾ ಬದಲಾಗುತ್ತಲೇ ಇದೆ. ಮೊದಲಿನಂತೆ ಭಾರವಾದ ಪುಸ್ತಕಗಳನ್ನು ಹೊತ್ತು ನಡೆಯುವ ಕಾಲ ಮಾಯವಾಗುತ್ತಿದೆ. ಎಲ್ಲವೂ ಇಲೆಕ್ಟ್ರಾನಿಕ್ ಮಯವೇ ಆಗಿರುವ ಈ ಕಾಲದಲ್ಲಿ ಆಡಿಯೋ ಪುಸ್ತಕಗಳೂ ಯಥೇಚ್ಛವಾಗಿ ಬಿಕರಿಯಾಗುತ್ತಿವೆ. ಯಾಂತ್ರಿಕ ಬದುಕನ್ನಷ್ಟೇ ಬದುಕುತ್ತಿರುವ ನಗರಗಳಲ್ಲಂತೂ ಇ - ಪುಸ್ತಕಗಳದ್ದೇ ಕಾರುಬಾರು.

ತರಾವರಿ ಇ - ಪುಸ್ತಕಗಳು ಲಭ್ಯವಿರುವ ಈ ಹೊತ್ತಿನಲ್ಲಿ ಮುದ್ರಣಾಲಯಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿರುವುದು ಖೇದದ ವಿಷಯವಾಗಿದ್ದರೂ, ಕಾಗದದ ತಯಾರಿಕೆಗೆ ಅತ್ಯಗತ್ಯವಾಗಿ ಬೇಕಾಗಿರುವ ಮರದ ಕಡಿತಕ್ಕೆ ಕಡಿವಾಣ ಹಾಕಿ, ಹಸಿರಿನ ಸೊಂಪನ್ನು ಸದಾಕಾಲ ನೋಡುವ, ನಮ್ಮ ಮುಂದಿನಪೀಳಿಗೆಗೂ ಉಸಿರನ್ನು( ಆಮ್ಲಜನಕವನ್ನು) ಉಳಿಸಿಕೊಳ್ಳುವ ಆಶಯವೂ ನಮ್ಮದಾಗಿದೆ.

ಈ ಇ- ಹೊತ್ತಿಗೆಗಳು (E-Books) TXT, EPUB, MOBI, AZW ಮತ್ತು PDF ..ಇತ್ಯಾದಿ ಸ್ವರೂಪಗಳಲ್ಲಿರಬಹುದು..

ಬಳಸಲು, ಶೇಖರಿಸಿಕೊಳ್ಳಲು ಸುಲಭವಾಗಿರುವ ಇ- ಹೊತ್ತಿಗೆಗಳು ತಂತ್ರಜ್ಞಾನದ ಹೊಸ ಹೊಸ ಆವಿಷ್ಕಾರಗಳ ಸದ್ಬಳಕೆಗೆ ಅತ್ಯುತ್ತಮ ಉದಾಹರಣೆಗಳಾಗಿವೆ. ಮುದ್ರಿತ ಪುಸ್ತಕಗಳನ್ನು ಜೋಡಿಸಿಡಲು ಅದೆಷ್ಟು ಭೌತಿಕ ಪ್ರದೇಶ ಬೇಕು ? ಈ ತೊಡಕಿನ ನಿವಾರಣೆಗಾಗಿ ಸಾವಿರಾರು ಪುಸ್ತಕಗಳನ್ನು ಒಂದು

ಉಗುರಿನ ಗಾತ್ರದಷ್ಟಿರುವ ಚಿಪ್ಪಿನಲ್ಲಿ ತುಂಬಿಸಿ ನಮ್ಮ ಕಿಸೆಯಲ್ಲಿ ಇಟ್ಟುಕೊಳ್ಳಬಹುದಾಗಿರುವುದು ನಿಜಕ್ಕೂ ಸೋಜಿಗದ ಸಂಗತಿಯೇ.

ಇ- ಪುಸ್ತಕಗಳ ನಿರಂತರ ಬಳಕೆಯು ಪ್ರಾರಂಭವಾಗಿ ಸುಮಾರು ಎರಡು ದಶಕಗಳೇ ಸಂದಿವೆ. ದಿನದಿಂದ ದಿನಕ್ಕೆ ಹೊಸ ರೂಪಾಂತರಗಳೊಡನೆ ನಮ್ಮನ್ನೂ, ನಮ್ಮ ಬದುಕನ್ನೂ ನವೀಕರಣಗೊಳಿಸಿಕೊಂಡು, ಹಳೆಯ ಮುದ್ರಿತ ಪುಸ್ತಕಗಳನ್ನೂ ದೀರ್ಘಕಾಲದವರೆಗೆ ಉಳಿಸಿಕೊಂಡು ನಮ್ಮ ಅಸ್ತಿತ್ವದ ಬೇರುಗಳನ್ನು ಭದ್ರಪಡಿಸುವ ನಿಟ್ಟಿನಲ್ಲಿಯೂ ಪೂರಕವಾಗಿರುವ ಇ ಹೊತ್ತಿಗೆಗಳಿಗೆ ಈ ಹೊತ್ತಿನಲ್ಲೊಮ್ಮೆ ಉಘೇ ಎಂದು ಬಿಡೋಣ.